ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಅಂಕೋಲಾ
OS ನಂಬರ. 49/2018

ಪಿ ಡಬ್ಲ್ಯೂ-4

ದಿಃ 30-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಸಾಕ್ಷಿಯ ಹೆಸರುಃ ಉಮೇಶ ಆಗೇರ
ತಂದೆಯ ಹೆಸರುಃ ಸೋಮು
ವಯಸ್ಸುಃ 54 ವರ್ಷ
ಉದ್ಯೋಗಃ ಎ ಡಿ ಎಲ್ ಆರ್ ಕುಮಟಾ
ವಿಳಾಸಃ ಕುಮಟಾ

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಎನ್.ಎಂ.ಎನ್ ಇವರಿಂದಃ

ದಿಃ30-08-2024 ರಿಂದ ಕುಮಟಾ ಎ ಡಿ ಎಲ್ ಆರ್ ಆಗಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನಾನು ಈ ಪ್ರಕರಣದಲ್ಲಿ ಯಾವುದೇ ಸರ್ವೆ ಮಾಡಿರುವುದಿಲ್ಲ. ಅಳತೆ ಮಾಡಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸಾಕ್ಷಿಗೆ ನಿಪಿ-64 ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನಮ್ಮ ಇಲಾಖೆಯ ಸರ್ವೇಯರ್ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.ಯಾವ ಸರ್ವೆಯರ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಎಂ.ಬಿ ಚಿಕ್ಕದೊಳ್ಳಿ ಎನ್ನುವವರು ಮಾಡಿರುತ್ತಾರೆ. ಸಾಕ್ಷಿಯು ಮೂಲ ಕಡತವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅದನ್ನು ನಿಶಾನೆಯನ್ನಾಗಿ ಮಾಡಲು ಪ್ರತಿವಾದಿ ಪರ ವಕೀಲರು

ತಕರಾರು ಎತ್ತಿದ್ದರಿಂದ ತಕರಾರಿಗೆ ಒಳಪಟ್ಟು ಸಂಪೂರ್ಣ ಕಡತವನ್ನು ನಿಪಿ-69 ಎಂದು ಗುರುತಿಸಲಾಯಿತು. ಕಡತದಲ್ಲಿರುವ ನಕ್ಷೆಯನ್ನು ಯಾವ ಉದ್ದೇಶಕ್ಕಾಗಿ ಮಾಡಲಾಗಿತ್ತು ಎಂದರೆ ಸಾಕ್ಷಿಯು ಹದ್ದುಬಸ್ತು ಅಳತೆಯ ಕುರಿತು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ಯಾವ ಸರ್ವೆ ನಂಬರ್ ಕುರಿತು ಹದ್ದಬಸ್ತು ಮಾಡಲಾಗಿತ್ತು ಎಂದು ದಾಖಲೆಯನ್ನು ನೋಡಿ ಹೇಳಲು ಆಗುತ್ತದೆಯಾ ಎಂದರೆ ಸಾಕ್ಷಿಯು ಸರ್ವೆ ನಂ.180 ನೆದ್ದಕ್ಕೆ ಸಂಬಂಧಪಟ್ಟು ಮಾಡಲಾಗಿತ್ತು ಎಂದು ನುಡಿಯುತ್ತಾರೆ. ನನಗೆ ಬೇರೆ ಯಾವುದೇ ಮಾಹಿತಿ ಇರುವುದಿಲ್ಲ.

<u>ಪಾಟೀ ಸವಾಲುಃ</u> ಪ್ರತಿವಾದಿಯರ ಪರ ವಕೀಲರಾದ ಶ್ರೀ ಎಂ.ಪಿ.ಬಿ ಇವರಿಂದಃ

2. ನೀವೇನಾದರೂ ದಾವಾ ಜಮೀನಾದ ಸರ್ವೆ ನಂ.180 ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಪಿ-64 ಹದ್ದುಬಸ್ತು ನಕಾಶೆಯನ್ನು ಯಾರು ತೆಗೆದು ಪ್ರತಿಯನ್ನು ಮಾಡಿಕೊಟ್ಟುರುತ್ತಾರೆ ಎಂದರೆ ಸರಿ. ಜಮೀನು ಸರ್ವೆ ನಂಬರಿನಲ್ಲಿ ತೋರಿದ ಒತ್ತುವರಿಯನ್ನು ಹೇಳಲು ಸರ್ವೆ ಮಾಡಿದ ಸರ್ವೆಯರ್ ಸರಿಯಾದ ವ್ಯಕ್ತಿ ಎಂದರೆ ಸರಿ. ನೀವು ಹಾಜರುಪಡಿಸಿದ ಕಡತವನ್ನು ತರಲು ನ್ಯಾಯಾಲಯದಿಂದ ಯಾವುದೇ ಸಮನ್ಸ ಬಂದಿರುವುದಿಲ್ಲ ಎಂದರೆ ಸರಿ. ಅದೇ ರೀತಿ ಪಕ್ಷಗಾರರೂ ಸಹ ಹಾಜರುಪಡಿಸಲು ಹೇಳಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಇದೆ

ಹೆಚ್ಚುವರಿ ಜೆ.ಎಂ.ಎಫ್.ಸಿ., ಅಂಕೋಲಾ.